

ನಿಗದಿಗೊಳಿಸಿದ ಜಾಗದಲ್ಲಿ ಮರದಡಿ ಹರಡಿದ ಅಕ್ಕಿ ಮತ್ತು ಮಣ್ಣಿನ ಪಾತ್ರೆಯಲ್ಲಿ ತುಂಬಿಸಿರುವ ನೀರಿಗಾಗಿ ಆಗಮಿಸುವ ಪಕ್ಷಿಗಳನ್ನು ನೋಡುವುದೇ ಆನಂದ. ಶಾಲಾ ಆವರಣದಲ್ಲಿನ ಗಿಡ-ಮರಗಳ ಪಾಲನೆಯಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಳ್ಳುವುದು ವಿಶೇಷ.

ಬಾಲ ಸರ್ಕಾರ ರೂಪಿಸಿಕೊಂಡು, ವಿವಿಧ ಕಾರ್ಯಗಳ ಹೊಣೆ ಹೊತ್ತು, ಅವುಗಳನ್ನು ಸಮರ್ಥವಾಗಿ ನಿರ್ವಹಿಸುವ ಮಕ್ಕಳು ಮುಂದೆ ಉತ್ತಮ ನಾಯಕರಾಗಲು ಸನ್ನದ್ಧರಾಗಿರುತ್ತಾರೆ. ಶಾಲಾ ಆವರಣದ ಸ್ವಚ್ಛತೆ, ಊಟದ



ಜಲ ಸಂಗ್ರಹ ವ್ಯವಸ್ಥೆ


ಮಕ್ಕಳಿಂದ ಮಾದರಿ ರಚನೆ

ನಿರ್ವಹಣೆ, ಕಾರ್ಯಕ್ರಮಗಳ ಆಯೋಜನೆ, ಇತ್ಯಾದಿಗಳನ್ನು ವಿದ್ಯಾರ್ಥಿಗಳೇ ನೋಡಿಕೊಳ್ಳುತ್ತಾರೆ.

ಪಾದರಕ್ಷೆಗಳನ್ನು ಸಹ ಓರಣವಾಗಿ ಜೋಡಿಸಿಡುವ ಮಟ್ಟಕ್ಕೆ ಮಕ್ಕಳು ಶಿಸ್ತನ್ನು ಮೈಗೂಡಿಸಿಕೊಂಡಿದ್ದಾರೆ. ಅಗತ್ಯವಿದ್ದಾಗ ಪ್ರಥಮ ಚಿಕಿತ್ಸೆ ನೀಡುವುದನ್ನೂ ಇವರು ಅರಿತಿದ್ದಾರೆ. ಇವರ ಚಟುವಟಿಕೆಗಳು ಶಾಲೆಯ ಆವರಣ ದಾಟಿ ಹತ್ತಿರದ ಹಳ್ಳಿಗಳಿಗೂ ಹಬ್ಬಿವೆ. ಆರೋಗ್ಯ, ಸ್ವಚ್ಛತೆ, ಪರಿಸರ ಸಂರಕ್ಷಣೆ, ಇತ್ಯಾದಿ ಪ್ರಚಲಿತ ವಿ?ಯಗಳ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸುತ್ತಾರೆ. ತಾವೇ ತಯಾರಿಸಿದ ಭಿತ್ತಿಪತ್ರಗಳನ್ನು ಮಕ್ಕಳು ಈ ಅಭಿಯಾನದಲ್ಲಿ ಬಳಸಿಕೊಳ್ಳುತ್ತಾರೆ. ಪ್ರತಿ ವಾರ ಗ್ರಾಮವಾಸಿಗರ ಸಭೆ ಸೇರಿಸಿ, ಅವರ ಅಗತ್ಯಗಳನ್ನರಿತು, ಅವುಗಳ ಪೂರೈಕೆಗೆ ನೆರವಾಗುತ್ತಾರೆ. ಹಾಗಾಗಿ ಈ ಶಾಲೆ ಮತ್ತು ಅದರ ವಿದ್ಯಾರ್ಥಿಗಳೆಂದರೆ ಗ್ರಾಮಸ್ಥರಿಗೆ ವಿಶೇ? ಮಮತೆ.

ವಿದ್ಯಾರ್ಥಿಗಳು ತಾವು ಮಾಡಿದ ಒಳ್ಳೆಯ ಕಾರ್ಯಗಳ ವಿವರಗಳನ್ನು ಬರೆದು ಶಾಲೆಗೆ ತಲುಪಿಸುವ ಪದ್ಧತಿಯನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಮಕ್ಕಳು ಬರೆದುಕೊಟ್ಟ ಈ ದಾಖಲೆಗಳನ್ನು ಮುಖ್ಯೋಪಾಧ್ಯಾಯರು ಜೋಪಾನವಾಗಿರಿಸಿಕೊಂಡಿದ್ದಾರೆ. ಅವುಗಳನ್ನವರು ಅತಿಥಿಗಳಿಗೆ ಹೆಮ್ಮೆಯಿಂದ ಪರಿಚಯಿಸುತ್ತಾರೆ. ಮಕ್ಕಳು ರಚಿಸಿದ ಚಿತ್ರಗಳನ್ನು ಶಾಲಾ ಕೊಠಡಿಗಳಲ್ಲಿ ಪ್ರದರ್ಶಿಸುವ ಮೂಲಕ ಅವರಿಗೆ ಉತ್ತೇಜನ ನೀಡುತ್ತಾರೆ. ಅವರು ತಯಾರಿಸಿದ ಕರಕುಶಲ ವಸ್ತುಗಳು ಮತ್ತು ಕಲಿಕಾ ಸಾಧನಗಳನ್ನು ಪ್ರದರ್ಶಿಸಿದ್ದಾರೆ. ವಿದ್ಯಾರ್ಥಿಗಳ ಜ್ಞಾನವೃದ್ಧಿಗೆ ನೆರವಾಗಲು ಸ್ಮಾರ್ಟ್ ರೂಮ್ ಸ್ಥಾಪಿಸಿದ್ದಾರೆ. ಈ ಶಾಲೆಯಲ್ಲಿ ಇಂಗ್ಲಿಷ್ ಸಹ ಕಲಿಸುತ್ತಾರೆ. ಮಕ್ಕಳ ಕಲಿಕೆಗೆ ಪೂರಕವಾಗಬಲ್ಲ ಶೈಕ್ಷಣಿಕ ಪ್ರವಾಸಗಳಿಗೆ ಹಣದ ಕೊರತೆ ಅಡ್ಡಿಯಾಗದಂತೆ ನೋಡಿಕೊಳ್ಳುತ್ತಾರೆ.

ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರ್ತಿಸಿ, ಅವರಿಗೆ ವಿಶೇಷ ತರಬೇತಿ ನೀಡಿ, ಅವರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ನಡೆಸುತ್ತಿರುವ ಶಿಕ್ಷಕರು ಅಭಿನಂದನಾರ್ಹರು.

ಶಾಲೆಯ ಬಗ್ಗೆ ಭಾವುಕರಾಗಿ ಘಂಟೆಗಟ್ಟಲೆ ಮಾತನಾಡುವ ಪಂಕಜ್ ಚೌಹಾಣ್ ತಮಗೆ ಪ್ರೇರಣೆ ನೀಡಿದ ಆದರ್ಶ ಗುರು ಮೊಹಮದ್ ಹಸಿನ್‌ರನ್ನು ಮನದಾಳದಿಂದ ನೆನೆಯುತ್ತಾರೆ. ಮಾದರಿ ಶಾಲೆಯ ಕನಸನ್ನು ನನಸಾಗಿಸುವ ದಿಸೆಯಲ್ಲಿ ಸಹಾಯಹಸ್ತ ನೀಡುತ್ತಿರುವ ಸಹ ಶಿಕ್ಷಕರು, ಪೋಷಕರು, ಗ್ರಾಮ ಮುಖಂಡರು, ಗ್ರಾಮಸ್ಥರು, ಕೊಡುಗೈ ದಾನಿಗಳು,